# 16.ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹನುಮಂತಾಪುರ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹನುಮಂತಾಪುರ, ಅರಹತೊಳಲು ಕ್ಲಸ್ಟರ್, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ, ಪ್ರಾಥಮಿಕ ಶಾಲೆಯು ಭದ್ರಾವತಿ. ನಗರ ದಿಂದ 25 ಕಿಲೋಮೀಟರ್ ದೂರದಲ್ಲಿ ಇರುವ ಒಂದು ಪುಟ್ಟ ಗ್ರಾಮವಾಗಿದೆ. ಭದ್ರಾವತಿ ಆನವೇರಿ ಹೋಗುವ ಮಾರ್ಗದಲ್ಲಿರುವ ಈ ಶಾಲೆಯು 1924 ನೇ ಇಸ್ವಿಯಲ್ಲಿ ಪ್ರಾರಂಭವಾಗಿದ್ದು, ಹಲವಾರು ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡುತ್ತಾ ಬಂದಿದೆ.

ಪ್ರಸ್ತುತ ಈ ಶಾಲೆಯಲ್ಲಿ 76 ವಿದ್ಯಾರ್ಥಿಗಳಿದ್ದು, ನಾಲ್ಕು ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. JOURNEY OF THOUSEND KILO METERS IS STARTS FROM ONE STEP ಅನ್ನುವ ಮಾತಿದೆ. ಯಾವುದೇ ಯಶಸ್ಸು ಅಥವಾ ಬದಲಾವಣೆ ರಾತ್ರಿ ಕಳೆದು ಬೆಳಗಾಗುವುದರೊಳಗೆ ಸಾಧ್ಯವಿಲ್ಲ ಹಾಗೆಯೇ ಮಕ್ಕಳ ಕಲಿಕೆ ಕೂಡ ಹಂತಹಂತವಾಗಿ ರೂಪಿತವಾಗಬೇಕಾಗಿದೆ. ಈ ಮಕ್ಕಳ ಕಲಿಕೆಗೆ ಶಿಕ್ಷಕರೆಲ್ಲಾ ಸೇರಿ ವಿಶೇಷ ಚಟುವಟಿಕೆಯನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಿದೆವು. ಅದಕ್ಕೆ ಅನುಗುಣಾವಾಗಿ ರೂಪುರೇಷೆಗಳನ್ನು ಹಾಕಿಕೊಂಡೆವು. ಅದರಲ್ಲಿ ಮೊದಲನೆಯದು

### *ಶಾಲೆಯ ಭೌತಿಕ ಪರಿಸರ*

ಮಕ್ಕಳು ಕಲಿಕೆಯಲ್ಲಿ ತೊಡಗಬೇಕಾದರೆ ಮೊದಲು ಶಾಲಾ ಆವರಣ ಆಕರ್ಷಣೀಯವಾಗಿರಬೇಕು ಆ ನಿಟ್ಟಿನಲ್ಲಿ ಶಾಲೆಯ ಗೋಡೆಗಳ ಮೇಲೆ ಆಕರ್ಷಕವಾಗಿ ಕಾಣುವಂತೆ ಫಂಖಐಚ ೦ಖಖಿ ಬಿಡಿಸಲಾಯಿತು. ಮಕ್ಕಳಿಗೆ ಖುಷಿಯನ್ನು ತರುವ ಚಿತ್ರಗಳನ್ನು ಬರೆಸಲಾಯಿತು. ಸಂಪೂರ್ಣ ಸ್ವಚ್ಛತೆಯ ಕಡೆಗೆ ಗಮನಹರಿಸಿ ಶಾಲಾ ಪರಿಸರವನ್ನು ಸುಂದರ ಗೊಳಿಸಲಾಯಿತು.

### *ಶೈಕ್ಷಣಿಕ ಚಟುವಟಿಕೆಗಳು*

ನಮ್ಮ ಶಾಲೆಯಲ್ಲಿ ಟಿಎಲ್‌ಎಂ ಲ್ಯಾಬ್ ಅನ್ನು ತೆರೆಯಲಾಗಿದೆ. ಇದರ ವಿಶೇಷವೇನೆಂದರೆ ಪಠ್ಯದಲ್ಲಿ ಬರುವ ಕಲಿಕಾಂಶಗಳಿಗೆ ಅನುಗುಣವಾಗಿ ಪ್ರತಿ ವಿಷಯದಲ್ಲೂ ಕಲಿಕೋಪಕರಣಗಳನ್ನು ತಯಾರಿಸಿ ಅದರ ಬಳಕೆಯನ್ನು ಮಾಡಲಾಗುತ್ತಿದೆ. ವಿಶೇಷವೆಂದರೆ ಕಲಿಕೋಪಕರಣಗಳನ್ನು ಸ್ವತಃ ಮಕ್ಕಳೇ ತಯಾರಿಸುತ್ತಾರೆ. ಸ್ವ ಅನುಭವದಿಂದ ಕಲಿಕೆಯನ್ನು ಹೊಂದಿರುತ್ತಾರೆ.

ಫೆಬ್ರವರಿ ತಿಂಗಳಿನಲ್ಲಿ ನಡೆದ ವಿಜ್ಞಾನ ದಿನಾಚರಣೆಯಂದು ನಮ್ಮ ಶಾಲೆಯಲ್ಲಿ ಮೂವತ್ತಕ್ಕೂ ಹೆಚ್ಚು ಮಾಡಲ್ ಗಳನ್ನು ತಯಾರಿಸಿ ಅದರ ವಿವರಣೆಯನ್ನು ನೀಡಿರುತ್ತಾರೆ. ಮಕ್ಕಳ ಆಸಕ್ತಿಯನ್ನು ಕಂಡ ಪೋಷಕರು, ಅಧಿಕಾರಿ ವರ್ಗದವರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

### *ಇಂಗ್ಲಿಷ್ ಕಲಿಕೋಪಕರಣಗಳು*

ಆಂಗ್ಲ ಭಾಷೆಯಲ್ಲಿ ಹೆಚ್ಚಿನ ಕಲಿಕೆ ಉಂಟುಮಾಡಲು ಅಕ್ಷರ ಕಲಿಕೆ, ವಾಕ್ಯ ಪ್ರಯೋಗ, ಕಥೆ ಹೇಳುವುದು, ವಾರ ತಿಂಗಳುಗಳನ್ನು ಓದುವುದು, ಟಿ.ಪಿ.ಆರ್ ಚಟುವಟಿಕೆಗಳನ್ನು ಮಾಡುವ ವಿಧಾನಗಳನ್ನು ಆಧರಿಸಿ ಕಲಿಕೋಪಕರಣಗಳನ್ನು ತಯಾರಿಸಲಾಗಿದೆ.

### *ನಲಿ-ಕಲಿ :-*

ಮಕ್ಕಳು ನಲಿಕಲಿಗೆ ಸಂಬಂಧಿಸಿದಂತೆ ಕಾರ್ಡ್ಸ್ ಗಳು, ಚಟುವಟಿಕೆಗಳನ್ನು ಮಾಡಲು ಕಲಿಕೋಪಕರಣ ಗಳನ್ನು ತಯಾರಿಸಲಾಗಿದೆ. ಕಲಿಕಾ ಚಪ್ಪರವನ್ನು ಮಕ್ಕಳಿಂದ ಮಾಡಿಸಿ ಅಂದ ಗೊಳಿಸಲಾಗಿದೆ.

### *ರೋಟರಿ ಸಹಯೋಗ:-*

ರೋಟರಿ ಕ್ಲಬ್ ಶಿವಮೊಗ್ಗ ವತಿಯಿಂದ ನಲಿ-ಕಲಿ ಟೇಬಲ್ ಗಳ ಮೂಲಕ ಮಕ್ಕಳಿಗೆ ಅದರ ಮೂಲಕ ಕಲಿಯಲು ಅವಕಾಶ ಮಾಡಲಾಗಿದೆ. ರೋಟರಿ ಸಹಯೋಗದಿಂದ ಸುಮಾರು 90 ಸಾವಿರ ವೆಚ್ಚದ ವಿವಿಧ ಸಾಮಾಗ್ರಿಗಳನ್ನು ಪಡೆಯಲಾಗಿದೆ. ಅದರಲ್ಲಿ ಮೂರನೇ ಒಂದು ಭಾಗ ಅಂದರೆ ಮುವತ್ತು ಸಾವಿರ ರೂಗಳನ್ನು ಶಾಲೆಯಿಂದ ನೀಡಲಾಗಿರುತ್ತದೆ. ಈ ಅನುದಾನದಲ್ಲಿ 25 ಸಾವಿರದಷ್ಟು ಮೌಲ್ಯದ ವಿಜ್ಞಾನ ಉಪಕರಣಗಳನ್ನು ಖರೀದಿಸಿದ್ದು, ಮಕ್ಕಳಿಗೆ ಪ್ರಯೋಗಗಳನ್ನು ಮಾಡಿ ತೋರಿಸಲು ಅನುಕೂಲಕರವಾಗಿದೆ.

ಸ್ಮಾರ್ಟ್ ಕ್ಲಾಸ್ ಮಾಡಲು ಪ್ರೊಜೆಕ್ಟರ್ ಮತ್ತು ಸ್ಕ್ರೀನ್ ನ್ನು ಬಳಸಿಕೊಳ್ಳಲಾಗುತ್ತಿದೆ. ವಿಜ್ಞಾನ ಅನೇಕ ವಿಡಿಯೋಗಳನ್ನು ತೋರಿಸಿ ಬೋಧನೆ ಮಾಡಲಾಗುತ್ತಿದೆ. ಸುಮಾರು 150 ಜೀ.ಬಿ.ಗೂ ಅಧಿಕವಾದ ಶೈಕ್ಷಣಿಕ ಮಾಹಿತಿಯನ್ನು ಸಂಗ್ರಹಿಸಿ ಮಕ್ಕಳಿಗೆ ಉಪಯೋಗ ಮಾಡಿಕೊಳ್ಳಲಾಗುತ್ತಿದೆ. ಅಲ್ಲದೆ ವೈಯಕ್ತಿಕ ಸ್ವಚ್ಛತೆ, ನೈರ್ಮಲ್ಯ ಮುಂತಾದ ವಿಚಾರಗಳ ಬಗ್ಗೆ ತಿಳಿಸಲಾಗುತ್ತಿದೆ. ಸ್ವತಂತ್ರ ಯೋಧರು, ದಾರ್ಶನಿಕರು ಮುಂತಾದ ಮಹಾನ್ ವ್ಯಕ್ತಿಗಳ ಜೀವನಚರಿತ್ರೆಯನ್ನು ತೋರಿಸಲಾಗುತ್ತಿದೆ. ಜ್ಞಾನ ವಿಜ್ಞಾನಕ್ಕೆ ಸಂಬಂಧಿಸಿದಂತೆ ಆಗುತ್ತಿರುವ ಬದಲಾವಣೆಗಳನ್ನು, ಆವಿಷ್ಕಾರಗಳನ್ನು ಮಕ್ಕಳಿಗೆ ವಾರಕ್ಕೊಮ್ಮೆ "ಸ್ಕೂಲ್ ಸಿನೆಮಾ" ಎಂಬ ಕಾರ್ಯಕ್ರಮದಡಿಯಲ್ಲಿ ತೋರಿಸುತ್ತಾ ಇದ್ದೇವೆ. ಪ್ರತಿ ಪಾಠಗಳಿಗೂ ಪಿ.ಪಿ.ಟಿ.ಯನ್ನು ತಯಾರಿಸಿ ಅದರಿಂದ ಹೆಚ್ಚು ಪರಿಣಾಮಕಾರಿಯಾಗುವಂತೆ ಬೋಧನೆ ಮಾಡುತ್ತಿದ್ದೇವೆ.

ಪತ್ರಿಕೆಗಳಲ್ಲಿ ಬರುವ ಅನೇಕ ಪ್ರಮುಖ ವಿಷಯಗಳಿಗೆ ಅನುಗುಣವಾಗಿ ಆಲ್ಬಮ್ ತಯಾರಿಸಿ, ಅದನ್ನು ಬೋಧನೆಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ಅನೇಕ ಧ್ವನಿಸುರಳಿಗಳನ್ನು ಸಂಗ್ರಹಿಸಿ ಬೋಧನೆಯಲ್ಲಿ ಬಳಸಲಾಗುತ್ತಿದೆ. ನೂರಕ್ಕೂ ಹೆಚ್ಚು ಧ್ವನಿಸುರುಳಿಗಳನ್ನು ಈಗಾಗಲೇ ಸಂಗ್ರಹಿಸಲಾಗಿದೆ. ವಾಯ್ಸ್ ರೆಕಾರ್ಡಿಂಗ್ ಗಳ ಮೂಲಕ ಆಡಿಯೋ ಕ್ಲಿಪ್ ಗಳನ್ನು ತಯಾರಿಸಲಾಗುತ್ತಿದೆ. ಹಲವಾರು ಕಲಿಕಾಂಶ ಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳನ್ನು ಸ್ಥಳ ಸಂದರ್ಶನಕ್ಕೆ ಕರೆದುಕೊಂಡು ಹೋಗಿ ಬೋಧನೆ ನಡೆಸಲಾಗುತ್ತಿದೆ. ಅಲ್ಲದೆ ಪ್ರತಿ ವರ್ಷವೂ ಸಹ ಪಠ್ಯ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಶಾಲಾ ಶೈಕ್ಷಣಿಕ ಪ್ರವಾಸ, ಶಾಲಾ ವಾರ್ಷಿಕೋತ್ಸವಗಳನ್ನು ನಡೆಸಿ ಮಕ್ಕಳಲ್ಲಿ ಶೈಕ್ಷಣಿಕ ಆಸಕ್ತಿಯನ್ನು ಮೂಡಿಸಲಾಗುತ್ತಿದೆ.

ಒಟ್ಟಾರೆ ಶಾಲೆಯ ಅಭಿವೃದ್ಧಿಗಾಗಿ ಶಿಕ್ಷಕ ವರ್ಗದವರು, ಗ್ರಾಮಸ್ಥರು, SDMCಯವರು ಮತ್ತು ಅಧಿಕಾರಿ ವರ್ಗದವರು ಕೆಲಸ ಮಾಡುತ್ತಿದ್ದು, ಇನ್ನೂ ಅಭಿವೃದ್ಧಿಯ ಕಾರ್ಯಗಳು ನಡೆಸಬೇಕಾಗಿದೆ.



ಇಂಗ್ಲೀಷ್ ಕಲಿಕೋಪಕರಣಗಳನ್ನು ಮಕ್ಕಳು ಪ್ರದರ್ಶಿಸುತ್ತಿರುವುದು.



ಡಯಟ್ ಅಧಿಕಾರಿಗಳಿಂದ ಟಿ ಎಲ್ ಎಂ ಲ್ಯಾಬ್ ವೀಕ್ಷಣೆ

Figure 1 ಶ್ರೀ.ಲಕ್ಷ್ಮೀಕಾಂತ್ ಸರ್ ರವರಿಂದ ವಸ್ತುಪ್ರದರ್ಶನ ವೀಕ್ಷಣೆ



ರೋಟರಿ ಕ್ಲಬ್. ಶಿವಮೊಗ್ಗ. ಅಧ್ಯಕ್ಷರಿಂದ ವೀಕ್ಷಣೆ.




ಕಾರ್ಯಕ್ರಮ ನಡೆಸಲು ಧ್ವನಿ ವರ್ದಕ ದ ಸೆಟ್



ಆಧುನಿಕ ವಿಜ್ಞಾನ ಉಪಕರಣಗಳು



ಉತ್ತಮವಾದ ಪೀಠೋಪಕರಣಗಳ ವ್ಯವಸ್ಥೆ



ರೋಟರಿ ಕ್ಲಬ್. ಶಿವಮೊಗ್ಗ. ಸದಸ್ಯರಿಂದ ವೀಕ್ಷಣೆ.



ರೋಟರಿ ಕ್ಲಬ್ ಶಿವಮೊಗ್ಗದಿಂದ ಕೊಡುಗೆ ಗಳನ್ನು ನೀಡಿದ ಬಗ್ಗೆ ಫಲಕ

ಆಧುನಿಕ ಪ್ರೊಜೆಕ್ಟರ್



ಸ್ಕ್ರೀನ್ ಪರದೆ




ಪ್ರೊಜೆಕ್ಟರ್



ಚಟುವಟಿಕೆಯ ಮೂಲಕ ಪಾಠಗಳ ಬೋಧನೆ



ಸಸ್ಯಗಳು ಪ್ರಚೋದನೆಗೆ ಪ್ರತಿಕ್ರಿಯೆ ನೀಡುತ್ತವೆ ಎಂಬ ಪ್ರಯೋಗದ ಫೋಟೊ



ನಲಿ-ಕಲಿ ಕಾರ್ಡಗಳ ಜೋಡಣೆ




ಅಕ್ಷರ ವೃಕ್ಷ ನಲಿ-ಕಲಿ ಕೊಠಡಿ.



ಟೇಬಲ್ , ಕುರ್ಚಿ ಆಸನ ವ್ಯವಸ್ಥೆ ಹೊಂದಿರುವ ನಲಿ–ಕಲಿ ತರಗತಿ.




ಆಧುನಿಕ ವಿಜ್ಞಾನ ಉಪಕರಣಗಳು



ಟೇಬಲ್ , ಕುರ್ಚಿ ಆಸನ ವ್ಯವಸ್ಥೆ ಹೊಂದಿರುವ ನಲಿ–ಕಲಿ ತರಗತಿ.



ವಾಷ್ ಬೆಸಿನ್ ಕೊಡುಗೆ: ರೋಟರಿ ಕ್ಲಬ್. ಶಿವಮೊಗ್ಗ.



ಅಕ್ವಾ–ಗಾರ್ಡ್ ವ್ಯವಸ್ಥೆ. ಕೊಡುಗೆ: ರೋಟರಿ ಕ್ಲಬ್. ಶಿವಮೊಗ್ಗ.



ಶಾಲಾ ಕಟ್ಟಡದ ಪೋಟೊ.